**ಅಸಲು ದಾವಾ. ನಂಃ 68 /2019**

**ಡಿ.ಡಬ್ಲು – 2**

**ಸಾಕ್ಷಿಯನ್ನು ದಿನಾಂಕಃ 15.03.2024 ರಂದು ಕರೆಯಿಸಿ, ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ನಂಬರ 10 ಮತ್ತು 11 ರವರ ಪರ ವಕೀಲರಾದ, ಶ್ರೀ ವಿ.ಎಸ್. ಬಿ ವಕೀಲರಿಂದಃ**

1. ನಿಂಗಪ್ಪನ ಹೆಂಡತಿಯ 10 ನೇ ಪ್ರತಿವಾದಿ ಶಾಂತವ್ವ ಎಂದರೆ ಸಾಕ್ಷಿಯು ನಾನು ನಿಂಗಪ್ಪನ ಹೆಂಡತಿ ಶಾಂತವ್ವ ಎಂದು ನುಡಿಯುತ್ತಾರೆ. ನಿಂಗಪ್ಪ ಮತ್ತು 10 ನೇ ಪ್ರತಿವಾದಿಯ ಸಂಬಂದದಿಂದ 11 ನೇ ಪ್ರತಿವಾದಿ ಆನಂದ ಜನಿಸಿದ್ದಾರೆ ಎಂದರೆ ಸರಿಯಲ್ಲ. ನಿಂಗಪ್ಪ ಕೆ ಎಸ್ ಆರ್ ಟಿ ಸಿ ಯಲ್ಲಿ ಚಾಲಕನಾಗಿ ಕೆಲಸ ಮಾಡುತ್ತಿದ್ದ ಎಂದರೆ ಸರಿ. ಸದರಿ ಕೆ ಎಸ್ ಆರ ಟಿ ಸಿ ಯವರು 10 ನೇ ಪ್ರತಿವಾದಿ ಮತ್ತು 11 ನೇ ಪ್ರತಿವಾದಿಗೆ ವಾರಸಾ ಪ್ರಮಾಣ ಪತ್ರ ತರುವಂತೆ ತಿಳಿಸಿದ್ದಾರೆ ಎಂದರೆ ಸರಿಯಲ್ಲ ಈ ಸಂಬಂದ 10 ಮತ್ತು 11 ನೇ ಪ್ರತಿವಾದಿ ಅಸಲು ದಾವಾ ನಂಬರ 07/2019 ನ್ನು ಪ್ರಧಾನ ಜಿಲ್ಲಾ ನ್ಯಾಯಾಲಯದಲ್ಲಿ ಘೋಷಣಾತ್ಮಕ ಪರಿಹಾರ ಕೋರಿ ನಮ್ಮ ಮತ್ತು ಕೆ ಎಸ್ ಆರ್ ಟಿ ಸಿ ವಿರುದ್ಧ ದಾವೆ ಸಲ್ಲಿಸಿದ್ದರು ಎಂದರೆ ಸರಿ. ಸದರಿ ದಾವೆಯಲ್ಲಿ ನಾನು ವಕೀಲರ ಮೂಲಕ ಹಾಜರಾಗಿದ್ದೆ ಎಂದರೆ ಸರಿ.

2. ಸದರಿ ದಾವೆ ಡಿಕ್ರಿಯಾಗಿದೆ ಎಂದರೆ ಸರಿಯಲ್ಲ . ಸಾಕ್ಷಿಯು ಮುಂದುವರೆದು ಸದರಿ ಡಿಕ್ರಿ ವಿರುದ್ಧ ಉಚ್ಚ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿ ಸಲ್ಲಿಸಿದ್ದೇನೆ ಎಂದು ನುಡಿಯುತ್ತಾರೆ . ಸದರಿ ಮೇಲ್ಮನವಿಗೆ ಸಂಬಂದಿಸಿದ ದಾಖಲೆಗಳು ಮನೆಯಲ್ಲಿ ಇವೆ. ನನಗೂ ನಿಂಗಪ್ಪನಿಗೂ ಯಾವುದೇ ಸಂಬಂದ ಇಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ ನಂಬರ 10 ಮತ್ತು 11 ರವರಿಗೆ ನಿಂಗಪ್ಪನ ಭಾಗಾಂಶದ 1/3 ಆಸ್ತಿಗೆ ಹಕ್ಕುದಾರರು ಎಂದರೆ ಸರಿಯಲ್ಲ. ನನ್ನ ಪ್ರಮಾಣ ಪತ್ರಿಕೆಯಲ್ಲಿ ಬರೆಸಿರುವ ಎಲ್ಲಾ ಸಂಗತಿಗಳು ಪ್ರತಿವಾದಿ ನಂಬರ 10 ಮತ್ತು 11 ರವರಿಗೆ ತೊಂದರೆ ಕೊಡುವ ಸಲುವಾಗಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ವಾದಿ ಪರ ವಕೀಲರು ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು ಸಕಾರಣ ಇಲ್ಲದ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

**ಮರುವಿಚಾರಣೆ ಇರುವುದಿಲ್ಲ.**

***(ತೆರೆದ ನ್ಯಾಯಾಲಯದಲ್ಲಿ, ನನ್ನ ಉಕ್ತಲೇಖನದಂತೆ, ಬೆರಳಚ್ಚು ಮಾಡಿಸಲಾಯಿತು.)***

ಓ. ಹೇ. ಕೇ. ಸರಿ ಅದೆ.

-ಸಹಿ-

ಹಿರಿಯ ದಿವಾಣಿ ನ್ಯಾಯಾಧೀಶರು, ರೋಣ.